637(607) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾರ್ಕಾಂಡೇಯ ನದಿಗೆ ಡ್ಯಾಂ ನಿರ್ಮಿಸಲಾಗಿದ್ದು, ಸದರಿ ಡ್ಯಾಂ ಈವರೆಗೆ ಪೂರ್ಣಗೊಳ್ಳದಿರಲು ಕಾರಣಗಳೇನು;

ಆ) ಡ್ಯಾಂ ನಿರ್ಮಾಣ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು;

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು;

ಈ) ಕಾಲುವೆಗಳು ಎಷ್ಟು ನಿರ್ಮಾಣಗೊಂಡಿವೆ; ಮತ್ತು ಇನ್ನು ಬಾಕಿ ಉಳಿದ ಕಾಲುವೆ ಎಷ್ಟು;

ಉ) ರೈತರ ಗದ್ದೆಗಳ ಹಣ ಮುಟ್ಟಿದೆಯೇ; ಮನೆಗಳಿಗೆ ಸ್ಥಳ ದೊರಕಿದೆಯೇ;

ಊ) ಈ ಜಲಾಶಯದ 60 ಎಕರೆ ಭೂಮಿಯ ವ್ಯಾಜ್ಯ ಮುಗಿಸಲು ತೆಗೆದುಕೊಂಡ ಕ್ರಮ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಮಾರ್ಕಂಡೇಯ ಅಣೆಕಟ್ಟಿನ ಒಟ್ಟು 26 ಬ್ಲಾಕುಗಳ ಪೈಕಿ, 24 ಬ್ಲಾಕುಗಳ ಕಾಂಕ್ರೀಟ್ ಕೆಲಸವು ಸಂಪೂರ್ಣಗೊಂಡಿದೆ. ಈ ಯೋಜನೆ ಅಡಿ ಮುಳುಗಡೆ ಆಗಲಿರುವ ಗ್ರಾಮಗಳಾದ ರಂಗಧೋಳಿ, ನಂದಿ, ನಿಂಗ್ಯಾನಟ್ಟಿ, ಕೆಂಚನಟ್ಟಿ, ಮಾವಿನಹೊಳಿ ಬೈಲೂರ ಹಾಗೂ ಗುತ್ತಿ ಗ್ರಾಮದ ಜನರು ತಮ್ಮ ಜಮೀನುಗಳು, ಮನೆಗಳು ಹಾಗೂ ಇತರೆ ಆಸ್ತಿಪಾಸ್ತಿಗಳ ಪರಿಹಾರ ಧನವನ್ನು ವಿತರಿಸುವಲ್ಲಿ ಭೂಸ್ವಾಧೀನ ಅಧಿಕಾರಿಗಳಿಂದ ವಿಳಂಬ ಆಗಿರುತ್ತದೆಯೆಂದು ಹಾಗೂ ಪೂರ್ಣ ಪ್ರಮಾಣದ ಪರಿಹಾರ ದೊರೆಯುವವರೆಗೆ ಉಳಿದ ಬ್ಲಾಕ್‌ಗಳ ಕಾಮಗಾರಿಯನ್ನು ಪ್ರಾರಂಭಿಸಲು ಅಡ್ಡಿಯುಂಟುಮಾಡಿರುತ್ತಾರೆ. ಆದ್ದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಆ) ಮಾರ್ಕಂಡೇಯ ಡ್ಯಾಂ ಪೂರ್ಣಗೊಳ್ಳಲು ಉಳಿದ 2 ಬ್ಲಾಕುಗಳ ಕಾಂಕ್ರೀಟ್ ಕಾಮಗಾರಿಯನ್ನು ಮುಗಿಸಬೇಕಾಗುತ್ತದೆ. ಆದರೆ, ಮುಳುಗಡೆಯಾಗುವ 7 ಗ್ರಾಮಗಳ ಗ್ರಾಮಸ್ಥರ ಪ್ರತಿಭಟನೆಯ ಕಾರಣದಿಂದ ಇದು ಸ್ಥಗಿತಗೊಂಡಿದೆ. ಸದರಿ ಬ್ಲಾಕುಗಳನ್ನು ಪೂರ್ಣಗೊಳಿಸಲು ಪ್ರತಿಭಟಿಸುತ್ತಿರುವ ಈ ಗ್ರಾಮಗಳ ಜನರನ್ನು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಬೇಕಾಗುವುದು. ಈಗಾಗಲೇ ವಾಘವಾಡ ಹಾಗೂ ಸಂತಿಬಸ್ತವಾಡೆ ಪುನರ್ವಸತಿ ಕೇಂದ್ರದಲ್ಲಿ ನಿರಾಶ್ರಿತರಾಗುವ ಜನರಿಗೆ ಪೂರ್ಣ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೇ ಗುತ್ತಿ ಹಾಗೂ ರಂಗಧೂಳಿ ಗ್ರಾಮಸ್ಥರಿಗೆ ಹೊಸ ಪುನರ್ವಸತಿ ಕೇಂದ್ರವನ್ನು ಬೆಳಗಾವಿ ತಾಲ್ಲೂಕಿನ ಬಸವನ ಕುಡಚಿ ಗ್ರಾಮದಲ್ಲಿ ಕಲ್ಪಿಸಲು ಯೋಜಿಸಲಾಗಿದ್ದು, ದಿನಾಂಕ 5-7-2004ರಂದು ಭೂಸ್ವಾಧೀನಾಧಿಕಾರಿಗಳಿಂದ, ನಿಗಮದ ಅಧಿಕಾರಿಗಳಿಗೆ ಜಮೀನನ್ನು ಹಸ್ತಾಂತರಿಸಿಕೊಳ್ಳಲಾಗಿದೆ. ಸದರಿ ಜಮೀನುಗಳಲ್ಲಿ ರಸ್ತೆ ನಿರ್ಮಾಣ,

ಗಟಾರ ನಿರ್ಮಾಣ, ಫ್ಲಾಟ್ ಮತ್ತು ಕಟ್ಟಡಗಳು, ನೀರು ಸರಬರಾಜು ಯೋಜನೆಗಳ ಕುರಿತು ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದೆ. ಶೀಘ್ರ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಈ ಕಾಮಗಾರಿಯನ್ನು ಮಾರ್ಚ್ 2007ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ

ಈ) ಅ) ಮಾರ್ಕಂಡೇಯ ಬಲದಂಡೆ ಕಾಲುವೆಯ ಒಟ್ಟು ಉದ್ದವು 71 ಕಿಮೀಗಳಿದ್ದು, ಈ ಪೈಕಿ ರೈಲ್ವೆ ಕ್ರಾಸಿಂಗ್ ಹೊರತುಪಡಿಸಿ ಉಳಿದೆಲ್ಲಾ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ. ಈ ಕಾಲುವೆಯ ವಿತರಣಾ ನಾಲೆಯ ಕೆಲಸಗಳು ಪ್ರಗತಿಯಲ್ಲಿದೆ.

ಬ) ಮಾರ್ಕಂಡೇಯ ಎರದಂಡೆ ಕಾಲುವೆಯ ಒಟ್ಟು ಉದ್ದವು 15 ಕಿಮೀಗಳಿದ್ದು, ಈ ಕಾಲುವೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಉ) ಈ ಯೋಜನೆಯಡಿಯಲ್ಲಿ ಬರುವ ಕೆಲಸದ ನಿರ್ಮಾಣದಲ್ಲಿ ಜಮೀನು ಕಳೆದುಕೊಂಡ ರೈತರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಿಡಕಲ್ ಡ್ಯಾಂ ಇವರಿಂದ ಹಂತಹಂತವಾಗಿ ಪರಿಹಾರ ಧನ ವಿತರಿಸಲಾಗುತ್ತಿದೆ. ಹಾಗೂ ಜಲಾಶಯದ ಹಿನ್ನೀರಿನಿಂದ ಬಾಧಿತವಾಗುವ ಮನೆಗಳು ಮತ್ತು ಜಮೀನುಗಳಿಗೂ ಸಹ ಪರಿಹಾರ ಧನ ವಿತರಿಸಿದೆ. ಮನೆ ಕಳೆದುಕೊಂಡ ಗ್ರಾಮಸ್ಥರಿಗೆ ವಾಘವಾಡೆ ಹಾಗೂ ಸಂತಿ-ಬಸ್ತವಾಡ ಪುನರ್ವಸತಿ ಕೇಂದ್ರಗಳಲ್ಲಿ ಫ್ಲಾಟ್‌ಗಳನ್ನು ನಿರ್ಮಿಸಲಾಗಿದೆ. ಗುತ್ತಿ ಹಾಗೂ ರಂಗಧೂಳಿ ಗ್ರಾಮಸ್ಥರಿಗೆ ಬಸವನ ಕೊಡಚಿಯಲ್ಲಿ ಇನ್ನೊಂದು ಪುನರ್ವಸತಿ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ.

ಊ) ಮಾರ್ಕಂಡೇಯ ಯೋಜನೆಯಡಿ ಮುಳುಗಡೆಯಾಗಲಿರುವ ಗುತ್ತಿ ರಂಗದೋಳಿ, ಕೆಂಚನಟ್ಟಿ ಗ್ರಾಮಗಳಿಗೆ ಸಂಬಂಧಿಸಿದಂತೆ ಭೂಸುಧಾರಣೆ ಕಾಯ್ದೆ ಕಲಂ 77ಎ ಪ್ರಕಾರ ರೈತರಿಗೆ ಭೂಮಿ ಮಂಜೂರು ಮಾಡಿ ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಇವರು ಆದೇಶ ಹೊರಡಿಸಿದ್ದು, ಇವುಗಳ ವಿರುದ್ಧ ಹಿತಾಸಕ್ತಿಯುಳ್ಳವರು ಕರ್ನಾಟಕ ಕಂದಾಯ ಕಾಯ್ದೆಯಡಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ಮಾಡಿದ ಮಂಡಳಿಯು ಸದರಿ ಪ್ರಕರಣದಲ್ಲಿ ಪುನರ್ ವಿಚಾರಣೆ ನಡೆಸಿ, ತೀರ್ಮಾನಿಸಲು ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಇವರಿಗೆ ಆದೇಶಿಸಿದ್ದು, ಇದರಂತೆ ಈ ಪ್ರಕರಣಗಳು ವಿಚಾರಣೆಯಲ್ಲಿವೆ. ಈ ಪ್ರಕರಣಗಳು ಅಂತಿಮವಾಗಿ ಇತ್ಯರ್ಥವಾದ ಮೇಲೆ ಅದರಂತೆ, ಪರಿಹಾರ ಧನ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು.

638(477) : ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ಏತ ನೀರಾವರಿ ಯೋಜನೆಗೆ ಸರ್ಕಾರ ಯಾವಾಗ ಮಂಜೂರಾತಿ ನೀಡಿರುವುದು;